# ಶರಣಸಂಸ್ಕೃತಿ ಉತ್ಸವ ಎಲ್‌ಇ ಡಿ ವಾಲ್ ಉದ್ಘಾಟನೆ

**ಚಿತ್ರದುರ್ಗ, ಅ. 21** - ದಿ. 22-10-2020 ರಿಂದ 28-10-2020ರವರೆಗೆ ನಡೆಯುವ ತಾವಿದ್ದಲ್ಲಿಯೇ ಶರಣಸಂಸ್ಕøತಿ ಉತ್ಸವ ಅಂಗವಾಗಿ ಸಾಮಾಜಿಕ ಜಾಲತಾಣಗಳು ಹಾಗು ಚಿತ್ರದುರ್ಗ ಜಿಲ್ಲೆಯ ಪ್ರತಿ ತಾಲ್ಲೂಕಿನ 21 ಹಳ್ಳಿಗಳಲ್ಲಿ ಉತ್ಸವ ಕಾರ್ಯಕ್ರಮಗಳ ನೇರ ಪ್ರಸಾರ ಮಾಡಲು ಎಲ್‌ಇಡಿ ವಾಲ್ ಒಳಗೊಂಡ ವಾಹನಗಳಿಗೆ ಡಾ. ಶಿವಮೂರ್ತಿ ಮುರುಘಾ ಶರಣರು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಗೌರವಾಧ್ಯಕ್ಷರಾದ ಜ. ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮಿಗಳು, ಅಥಣಿ ಗಚ್ಚಿನಮಠದ ಶ್ರೀ ಶಿವಬಸವ ಸ್ವಾಮಿಗಳು, ಶ್ರೀ ಬಸವ ಮಾಚಿದೇವ ಸ್ವಾಮಿಗಳು, ಶ್ರೀ ತಿಪ್ಪೇರುದ್ರ ಸ್ವಾಮಿಗಳು, ಶಾಸಕ ಗೂಳಿಹಟ್ಟಿ ಶೇಖರ್, ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ. ಪರಮಶಿವಯ್ಯ ಮೊದಲಾದವರಿದ್ದರು.



